ಸಭೆಯ ಮುಂದಿಡಲಾದ ಕಾಗದ ಪತ್ರಗಳ ಪಟ್ಟಿ

I. ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು)

1978ನೇ ಇಸವಿಯ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ 8(3) ಉಪ ಅನುಚ್ಛೇಧದ 1ನೇ ಕಲಮಿನ ಮೇರೆಗೆ;

1. 1993ನೇ ಸಾಲಿನ ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗೆ ನೇಮಕಾತಿ) (ವಿಶೇಷ ನೇಮಕಾತಿ)(ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ 3ನೇ ಜನವರಿ 1994ರಂದು ಹೊರಡಿಸಲಾದ ಸಿಆಸುಇ 46 ಸೇನಿಇ 93ನೇ ಕ್ರಮಾಂಕದ ಅಧಿಸೂಚನೆ;
2. 1971ನೇ ಸಾಲಿನ ಕರ್ನಾಟಕ ಅಗ್ನಿಶಾಮಕ ದಳ (ವೃಂದ ಮತ್ತು ನೇಮಕಾತಿ) ನಿಯಮಗಳಿಗೆ ತಿದ್ದುಪಡಿ ಮಾಡುವ ಕರಡು ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ 3ನೇ ಜನವರಿ 1994ರಂದು ಹೊರಡಿಸಲಾದ ಸಿಆಸುಇ 2 ಸೇನಿಡಿ 92ನೇ ಕ್ರಮಾಂಕದ ಅಧಿಸೂಚನೆ;

1965ನೇ ಇಸವಿಯ ಕರ್ನಾಟಕ ಅಬಕಾರಿ ಅಧಿನಿಯಮ 71(3)ನೇ ಕಲಮಿನ ಮೇರೆಗೆ;

3. 1963ನೇ ಇಸವಿಯ ಕರ್ನಾಟಕ ಅಬಕಾರಿ (ಅಬಕಾರಿ ಡ್ಯೂಟೀಸ್ ಮತ್ತು ಪೀ) ನಿಯಮಗಳ ತಿದ್ದುಪಡಿಗೆ ಸಂಬಂಧಿಸಿದಂತೆ ದಿನಾಂಕ 6-12-93 ಹೊರಡಿಸಲಾದ ಎಫ್‌ಡಿ 11 ಪಿಇಎಸ್ 93ನೇ ಕ್ರಮಾಂಕದ ಅಧಿಸೂಚನೆ;

1957ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ 39ನೇ ಕಲಮಿನ ಮೇರೆಗೆ;

4. ತಕ್ಷಣವೇ ಜಾರಿಗೆ ಬರುವಂತೆ ಕರ್ನಾಟಕದಲ್ಲಿ ಹೊಸದಾಗಿ ಸ್ಥಾಪನೆಯಾಗುವ 100 ಕೋಟಿ ರೂ.ಗಳಿಗಿಂತ ಹೆಚ್ಚಿಗೆ ಬಂಡವಾಳ ಹೂಡಿರುವ ಕಾರ್ಖಾನೆಗಳಲ್ಲಿ ತಯಾರು ಮಾಡುವ ಎಲೆಕ್ಟ್ರಾನಿಕ್ ಕಂಪ್ಯೂಟರ್ಸ್, ಪೆರಿಫರಲ್ಸ್, ಮತ್ತು ಬಿಡಿ ಭಾಗಗಳನ್ನೊಳಗೊಂಡಂತೆ ಕಂಪ್ಯೂಟರ್ ಸಾಫ್ಟ್‌ವೇರ್‌ಗಳ ಮಾರಾಟ ತೆರಿಗೆಯನ್ನು 5 ವರ್ಷಗಳ ಕಾಲಾವಧಿಯವರೆಗೆ ವಿನಾಯತಿ ನೀಡುವ ಸಂಬಂಧದಲ್ಲಿ ದಿನಾಂಕ 3-1-94 ಹೊರಡಿಸಲಾದ ಎಫ್‌ಡಿ 45 ಸಿಎಸ್‌ಎಲ್ 92ನೇ ಕ್ರಮಾಂಕದ ಅಧಿಸೂಚನೆ-1;

5. ತಕ್ಷಣವೇ ಜಾರಿಗೆ ಬರುವಂತೆ ಎಫ್‌ಡಿ 245 ಸಿಎಸ್‌ಎಲ್ 92(1) ದಿನಾಂಕ 3-1-94ರ ಅಧಿಸೂಚನೆಯ ನಿಬಂಧನೆ ಮೇರೆಗೆ ಕರ್ನಾಟಕದಲ್ಲಿ ತಯಾರು ಮಾಡುವ ಮತ್ತು ಮಾರಾಟ ಮಾಡುವ ಸರಕುಗಳ ಮೇಲಿನ ತೆರಿಗೆ ವಿನಾಯಿತಿ ಸಂಬಂಧದಲ್ಲಿ ದಿನಾಂಕ 3-1-94 ಹೊರಡಿಸಲಾದ ಎಫ್‌ಡಿ 245 ಸಿಎಸ್‌ಎಲ್ 92ನೇ ಕ್ರಮಾಂಕದ ಅಧಿಸೂಚನೆ-2;

6. ತಕ್ಷಣವೇ ಜಾರಿಗೆ ಬರುವಂತೆ ಕರ್ನಾಟಕದಲ್ಲಿ 100 ಕೋಟಿ ರೂ.ಗಳಿಗಿಂತ ಹೆಚ್ಚಿನ ಬಂಡವಾಳದಲ್ಲಿ ಸ್ಥಾಪನೆಯಾದ ಕಾರ್ಖಾನೆಗಳು ಉತ್ಪಾದನೆ ಮಾಡುವ ಎಲೆಕ್ಟ್ರಾನಿಕ್ ಕಂಪ್ಯೂಟರ್, ಪೆರಿಫರಲ್ಸ್, ಮತ್ತು ಬಿಡಿ ಭಾಗಗಳು ಮತ್ತು ಕಂಪ್ಯೂಟರ್ ಸಾಫ್ಟವೇರ್‌ಗಳನ್ನು ಮಾರಾಟ ಮಾಡುವ ವರ್ತಕರಿಂದ ಪಾವತಿ ಮಾಡಬೇಕಾಗಿರುವ ತೆರಿಗೆ ವಿನಾಯಿತಿ ಸಂಬಂಧದಲ್ಲಿ ದಿನಾಂಕ 3-1-94 ಹೊರಡಿಸಲಾದ ಎಫ್‌ಡಿ 245ಸಿಎಸ್‌ಎಲ್ 92ನೇ ಕ್ರಮಾಂಕದ ಅಧಿಸೂಚನೆ-3;

1979 ಸಾಲಿನ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆ 30(5)ನೇ ಕಲಮಿನ ಮೇರೆಗೆ;

7. ತಕ್ಷಣವೇ ಜಾರಿಗೆ ಬರುವಂತೆ ಕರ್ನಾಟಕದಲ್ಲಿ 100 ಕೋಟಿ ರೂ.ಗಳಿಗಿಂತ ಹೆಚ್ಚಿನ ಬಂಡವಾಳದ ಹೊಸ ಕಾರ್ಖಾನೆಗಳು ತಯಾರು ಮಾಡುವ ಎಲೆಕ್ಟ್ರಾನಿಕ್ ಕಂಪ್ಯೂಟರ್, ಕಂಪ್ಯೂಟರ್ ಪೆರಿಫರಲ್ಸ್ ಮತ್ತು ಬಿಡಿ ಭಾಗಗಳನ್ನೊಳಗೊಂಡಂತೆ ಕಂಪ್ಯೂಟರ್ ಸಾಫ್ಟ್‌ವೇರ್‌ಗಳು ತಯಾರಿಕೆಗೆ ಬಳಸುವ ಕಚ್ಚಾ ಸಾಮಾಗ್ರಿಗಳ ಮೇಲಿನ ಪ್ರವೇಶ ತೆರಿಗೆ ವಿನಾಯತಿ ಸಂಬಂಧದಲ್ಲಿ ಸಂಬಂಧದಲ್ಲಿ ದಿನಾಂಕ 3-1-94 ಹೊರಡಿಸಲಾದ ಎಫ್‌ಡಿ 245 ಸಿಎಸ್‌ಎಲ್ 92ನೇ ಕ್ರಮಾಂಕದ ಅಧಿಸೂಚನೆ-4;

1964ನೇ ಸಾಲಿನ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮ 22ನೇ ಕಲಮಿನ ಮೇರೆಗೆ;

8. ಬಳ್ಳಾರಪುರ ಉದ್ದಿಮೆ ಲಿಮಿಟೆಡ್, ಬೆಣಗಾ ತಾಲ್ಲೂಕು, ಕಾರವಾರ, ಉತ್ತರ ಕನ್ನಡ ಜಿಲ್ಲೆ ಇವರ ಸಭಾಗೃಹದಲ್ಲಿ 35 ಎಂ.ಎಂ. ಚಿತ್ರ ಪ್ರದರ್ಶನದ ಅನುಮತಿ ನೀಡುವ ಸಂಬಂಧದಲ್ಲಿ ದಿನಾಂಕ 13-12-93ರಂದು ಹೊರಡಿಸಲಾದ ಹೆಚ್‌ಡಿ 206 ಸಿಎನ್‌ಎ 93ನೇ ಕ್ರಮಾಂಕದ ಆದೇಶ;

1956ನೇ ಇಸವಿಯ ಕಂಪನಿಗಳ ಅಧಿನಿಯಮ 619 (ಎ) ಕಲಮಿನ ಮೇರೆಗೆ;

9. 1992-93ನೇ ಸಾಲಿನ ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತದ 8ನೇ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧಕರ ವರದಿಯನ್ನು ಸಭೆಯ ಮುಂದಿಡುತ್ತೇನೆ.

II. ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿ ಹಾಗೂ ನೀರಾವರಿ ಮತ್ತು ಇಂಧನ ಮಂತ್ರಿಗಳು :

1956ನೇ ಇಸವಿಯ ಕಂಪನಿಗಳ ಅಧಿನಿಯಮ 619(ಎ) ಕಲಮಿನ ಮೇರೆಗೆ ;

1991-92ನೇ ಸಾಲಿನ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ 22ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

III. ಶ್ರೀ ಎಂ.ವೈ. ಘೋರ್ಪಡೆ (ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು) :

1993ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 300(5)ನೇ ಕಲಮಿನ ಮೇರೆಗೆ ;

1. 1992-93ನೇ ಸಾಲಿನ ಬೆಳಗಾವಿ ಜಿಲ್ಲಾ ಪರಿಷತ್ ವಾರ್ಷಿಕ ಆಡಳಿತ ವರದಿ; (ಜ್ಞಾಪನಾಪತ್ರದೊಂದಿಗೆ)
2. 1992-93ನೇ ಸಾಲಿನ ತುಮಕೂರು ಜಿಲ್ಲಾ ಪರಿಷತ್ ವಾರ್ಷಿಕ ಆಡಳಿತ ವರದಿ; (ಜ್ಞಾಪನಾಪತ್ರದೊಂದಿಗೆ)

1993ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 262(3)ನೇ ಕಲಮಿನ ಮೇರೆಗೆ ;

3. 1989-90 ಹಾಗೂ 1990-91ನೇ ಸಾಲುಗಳ ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ನ ಪರಿಷ್ಕೃತ ವಾರ್ಷಿಕ ಲೆಕ್ಕಗಳು ;

4. 1990-91ನೇ ಸಾಲಿನ ತುಮಕೂರು ಜಿಲ್ಲಾ ಪಂಚಾಯತ್ನ ವಾರ್ಷಿಕ ಲೆಕ್ಕಪತ್ರಗಳು;
5. 1988-89 ಹಾಗೂ 1989-90ನೇ ಸಾಲುಗಳ ಚಿತ್ರದುರ್ಗ ಜಿಲ್ಲಾ ಪರಿಷತ್ನ ವಾರ್ಷಿಕ ಲೆಕ್ಕಗಳು ಮತ್ತು ಲೆಕ್ಕಪರಿಶೋಧನಾ ವರದಿ;
6. 1989-90ನೇ ಸಾಲಿನ ಹಾಸನ ಜಿಲ್ಲಾ ಪರಿಷತ್ನ ಲೆಕ್ಕಪರಿಶೋಧನಾ ವರದಿಗಳನ್ನು ಸಭೆಯ ಮುಂದಿಡುತ್ತೇನೆ.

IV. ಶ್ರೀ ಧರಮ್ಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಮಂತ್ರಿಗಳು):

1964ನೇ ಸಾಲಿನ ಕರ್ನಾಟಕ ಭೂ ಕಂದಾಯ ನಿಯಮ ಪ್ರಕರಣ 194(2)ನೇ ಕಲಮಿನ ಮೇರೆಗೆ;

1. ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ 16 ಗ್ರಾಮಗಳ 1989-90ನೇ ಸಾಲಿನ ಭೂ ಕಂದಾಯ 44878.04 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 22-1-94ರಂದು ಹೊರಡಿಸಲಾದ ಆರ್ಡಿ 6 ಟಿಆರ್ಎಂ 94ನೇ ಕ್ರಮಾಂಕದ ಅಧಿಸೂಚನೆ;
2. ಧಾರವಾಡ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ 60 ಗ್ರಾಮಗಳ 1985-86ನೇ ಸಾಲಿನ ಭೂ ಕಂದಾಯ 80656.28 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 22-1-94ರಂದು ಹೊರಡಿಸಲಾದ ಆರ್ಡಿ 211 ಟಿಆರ್ಎಂ 9(ಭಾಗ)ನೇ ಕ್ರಮಾಂಕದ ಅಧಿಸೂಚನೆ;
3. ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲ್ಲೂಕಿನ 7 ಗ್ರಾಮಗಳ 1990-91ನೇ ಸಾಲಿನ ಭೂ ಕಂದಾಯ 17443.39 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 13-1-94ರಂದು ಹೊರಡಿಸಲಾದ ಆರ್ಡಿ 119 ಟಿಆರ್ಎಂ 93ನೇ ಕ್ರಮಾಂಕದ ಅಧಿಸೂಚನೆ;
4. ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ 27 ಗ್ರಾಮಗಳ 1984-85ನೇ ಸಾಲಿನ ಭೂ ಕಂದಾಯ 255937.20 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 13-1-94ರಂದು ಹೊರಡಿಸಲಾದ ಆರ್ಡಿ 81 ಟಿಆರ್ಎಂ 91(ಭಾಗ)ನೇ ಕ್ರಮಾಂಕದ ಅಧಿಸೂಚನೆ;
5. ಧಾರವಾಡ ಜಿಲ್ಲೆಯ ಸವಣೂರ ತಾಲ್ಲೂಕಿನ 16 ಗ್ರಾಮಗಳ 1984-85ನೇ ಸಾಲಿನ ಭೂ ಕಂದಾಯ 30739.39 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 3-1-94ರಂದು ಹೊರಡಿಸಲಾದ ಆರ್ಡಿ 58 ಟಿಆರ್ಎಂ 91(ಭಾಗ)ನೇ ಕ್ರಮಾಂಕದ ಅಧಿಸೂಚನೆ;
6. ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ 56 ಗ್ರಾಮಗಳ 1992-93ನೇ ಸಾಲಿನ ಭೂ ಕಂದಾಯ 64723.15 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 3-1-94ರಂದು ಹೊರಡಿಸಲಾದ ಆರ್ಡಿ 126 ಟಿಆರ್ಎಂ 93ನೇ ಕ್ರಮಾಂಕದ ಅಧಿಸೂಚನೆ;
7. ಧಾರವಾಡ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ 4 ಗ್ರಾಮಗಳ 1981-82ನೇ ಸಾಲಿನ ಭೂ ಕಂದಾಯ 22796.87 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 3-1-94ರಂದು ಹೊರಡಿಸಲಾದ ಆರ್ಡಿ 213 ಟಿಆರ್ಎಂ 91(ಭಾಗ)ನೇ ಕ್ರಮಾಂಕದ ಅಧಿಸೂಚನೆ;
8. ಧಾರವಾಡ ಜಿಲ್ಲೆಯ ಮುಂಡರಗಿ ತಾಲ್ಲೂಕಿನ 52 ಗ್ರಾಮಗಳ 1983-84ನೇ ಸಾಲಿನ ಭೂ ಕಂದಾಯ 132174.36 ರೂ.ಗಳನ್ನು ಮನ್ನಾ ಮಾಡುವ

ಸಂಬಂಧದಲ್ಲಿ ದಿನಾಂಕ 10-1-94ರಂದು ಹೊರಡಿಸಲಾದ ಆರ್‌ಡಿ 39 ಟಿಆರ್‌ಎಂ 92ನೇ ಕ್ರಮಾಂಕದ ಅಧಿಸೂಚನೆ;

9. ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ 101 ಗ್ರಾಮಗಳ 1992-93ನೇ ಸಾಲಿನ ಭೂ ಕಂದಾಯ 89523.81 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 3-1-94ರಂದು ಹೊರಡಿಸಲಾದ ಆರ್‌ಡಿ 127 ಟಿಆರ್‌ಎಂ 93ನೇ ಕ್ರಮಾಂಕದ ಅಧಿಸೂಚನೆ;

10. ರಾಯಚೂರು ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ 168 ಗ್ರಾಮಗಳ 1992-93ನೇ ಸಾಲಿನ ಭೂ ಕಂದಾಯ 182568.67 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 11-1-94ರಂದು ಹೊರಡಿಸಲಾದ ಆರ್‌ಡಿ 127 ಟಿಆರ್‌ಎಂ 93ನೇ ಕ್ರಮಾಂಕದ ಅಧಿಸೂಚನೆಗಳನ್ನು ಸಭೆಯ ಮುಂದಿಡುತ್ತೇನೆ.

V. ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಮಂತ್ರಿಗಳು):

1959ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ 130ನೇ ಕಲಮಿನ ಮೇರೆಗೆ ;

1. ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಯ ತಿದ್ದುಪಡಿ ಸಂಬಂಧದಲ್ಲಿ ದಿನಾಂಕ 31-12-93ರಂದು ಹೊರಡಿಸಲಾದ ಸಿಎಂಡಬ್ಲ್ಯು 560 ಸಿಎಲ್‌ಎಂ 91ನೇ ಕ್ರಮಾಂಕದ ಅಧಿಸೂಚನೆ;

1966ನೇ ಇಸವಿಯ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಕಾಯ್ದೆಯ 153ನೇ ಕಲಮಿನ ಮೇರೆಗೆ;

2. ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ನಿಯಮಾವಳಿ 1968ಕ್ಕೆ ತಿದ್ದುಪಡಿಯ ಸಂಬಂಧದಲ್ಲಿ ದಿನಾಂಕ 27-1-94ರಂದು ಹೊರಡಿಸಲಾದ ಸಿಎಂಡಬ್ಲ್ಯು 174 ಎಂಆರ್‌ಇ 91ನೇ ಕ್ರಮಾಂಕದ ಅಧಿಸೂಚನೆಗಳನ್ನು ಸಭೆಯ ಮುಂದಿಡುತ್ತೇನೆ.

VI. ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಮತ್ತು ವಕ್ಫ್ ಮಂತ್ರಿಗಳು):

1976 ನೇಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 42(3)ನೇ ಕಲಮಿನ ಮೇರೆಗೆ;

1989-90ನೇ ಸಾಲಿನ ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡದ ಲೆಕ್ಕಪರಿಶೋಧನಾ ವರದಿಯನ್ನು ಸಭೆಯ ಮುಂದಿಡುತ್ತೇನೆ.

VII. ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಮಂತ್ರಿಗಳು)

1957ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮದ 16(2)ನೇ ಕಲಮಿನ ಮೇರೆಗೆ.

1. ದಿ ಟೆಕ್ನಿಕಲ್ ಟ್ರೈನಿಂಗ್ ಸೆಂಟರ್ ಫಾರ್ ದಿ ಡೆಫ್, ಬೆಂಗಳೂರು ಇವರ ವಾಹನ ಸಂಖ್ಯೆ:ಸಿಕೆಜೆ 8327ಕ್ಕೆ ತೆರಿಗೆ ವಿನಾಯತಿ ನೀಡುವ ಸಂಬಂಧದಲ್ಲಿ ದಿನಾಂಕ 10-12-93ರಂದು ಹೊರಡಿಸಲಾದ ಎಫ್‌ಡಿ 290 ಟಿಎಂಟಿ 91ನೇ ಕ್ರಮಾಂಕದ ಅಧಿಸೂಚನೆ;

2. ಅ.ಸಿ.ಸಿ. ಸೇವಾ ನಿಲಯ, ಚಾಮರಾಜನಗರ ಇವರು ಹೊಂದಿರುವ ವಾಹನಗಳ ಸಂಖ್ಯೆ : ಕೆಎ-10 :ಎಂ.31 ಮತ್ತು ಕೆಎ-10 :ಎಂ.58 ಗಳಿಗೆ ತೆರಿಗೆ ವಿನಾಯತಿ ನೀಡುವ ಸಂಬಂಧದಲ್ಲಿ ದಿನಾಂಕ 14-12-93ರಂದು ಹೊರಡಿಸಲಾದ ಎಫ್ಟಿಡಿ 86 ಟಿಎಂಟಿ 91ನೇ ಕ್ರಮಾಂಕದ ಅಧಿಸೂಚನೆ;

3. ಶ್ರವಣಬೆಳಗೊಳದ ಬಾಹುಬಲಿಯ ಮಹಾ ಮಸ್ತಕಾಭಿಷೇಕಕ್ಕೆ ಓಡಾಡುವ ವಾಹನಗಳಿಗೆ ತೆರಿಗೆ ವಿನಾಯತಿ ನೀಡುವ ಸಂಬಂಧದಲ್ಲಿ ದಿನಾಂಕ 18-12-93ರಂದು ಹೊರಡಿಸಲಾದ ಹೆಚ್‌ಟಿಡಿ 160ಟಿಎಂಟಿ 93ನೇ ಕ್ರಮಾಂಕದ ಅಧಿಸೂಚನೆಗಳನ್ನು ಸಭೆಯ ಮುಂದಿಡುತ್ತೇನೆ.

VIII. ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಮಂತ್ರಿಗಳು) :

1987ನೇ ಸಾಲಿನ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5)ನೇ ಕಲಮಿನ ಮೇರೆಗೆ;

1991-92ನೇ ಸಾಲಿನ ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿಯನ್ನು ಸಭೆಯ ಮುಂದಿಡುತ್ತೇನೆ.

IX. ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಮಂತ್ರಿಗಳು) :

1956ನೇ ಸಾಲಿನ ಕಂಪನಿಗಳ ಅಧಿನಿಯಮ 619(ಎ) ಕಲಮಿನ ಮೇರೆಗೆ;

1991-92ನೇ ಸಾಲಿನ ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತದ 14ನೇ ವರದಿ (ವಿಳಂಬಕ್ಕೆ ಕಾರಣಗಳೊಂದಿಗೆ)ಯನ್ನು ಮಂಡಿಸುವುದು.

X. ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಮಂತ್ರಿಗಳು) :

1956ನೇ ಸಾಲಿನ ಕಂಪನಿಗಳ ಅಧಿನಿಯಮ 619(ಎ) ಕಲಮಿನ ಮೇರೆಗೆ ;

1990-91ನೇ ಸಾಲಿನ ಕರ್ನಾಟಕ ಸ್ಟೇಟ್ ಆಗ್ರೋ ಕಾರ್ನ್ ಪ್ರಾಡಕ್ಟ್ಸ್ ಲಿಮಿಟೆಡ್ನ 18ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

XI. ಶ್ರೀ ರಾಮಲಿಂಗಾರೆಡ್ಡಿ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ರಾಜ್ಯ ಮಂತ್ರಿಗಳು) :

1956ನೇ ಸಾಲಿನ ಕಂಪನಿಗಳ ಅಧಿನಿಯಮ 619(ಎ) ಕಲಮಿನ ಮೇರೆಗೆ :

1. 1992-93ನೇ ಸಾಲಿನ ಮೈಸೂರು ಮಿನರಲ್ಸ್ ಲಿಮಿಟೆಡ್‌ನ 27 ನೇ ವಾರ್ಷಿಕ ವರದಿ;
2. 1992-93ನೇ ಸಾಲಿನ ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್‌ನ 58 ನೇ ವಾರ್ಷಿಕ ವರದಿ;
3. 1992-93ನೇ ಸಾಲಿನ ಎನ್.ಜಿ.ಇ.ಎಫ್. ಲಿಮಿಟೆಡ್ನ 28 ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳು;
4. 1992-93ನೇ ಸಾಲಿನ ದಿ ಮೈಸೂರು ಷುಗರ್ ಕಂಪನಿ ಲಿಮಿಟೆಡ್‌ನ 59 ನೇ ವಾರ್ಷಿಕ ವರದಿ;
5. 1992-93ನೇ ಸಾಲಿನ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ 13ನೇ ವಾರ್ಷಿಕ ವರದಿಗಳನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ರೈತರಿಂದ ಬಲಾತ್ಕಾರವಾಗಿ ಸಾಲ ವಸೂಲಾತಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ ನಿನ್ನೆಯ ದಿವಸ ತಾವು ಹೇಳಿದ ಹಾಗೆ ಈ ಸದನದಲ್ಲಿ ಆಶ್ವಾಸನೆಯನ್ನು ಕೊಟ್ಟರು. ರೈತರಿಂದ ಬಲಾತ್ಕಾರವಾಗಿ ಸಾಲ ವಸೂಲಾತಿಯ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡುತ್ತೇನೆಂದು ಹೇಳಿದ್ದರು.